ಬಂದವನೆಂದೂ ಹೆಂಗಸರಿಗೆ ಹೇಳಿದ.

'ಹೀಗೆ ನಡು ಮಧ್ಯಾಹ್ನಕ್ಕೂ ರಾತ್ರೆಗೂ ಇಲ್ಲಿಗೆ ಬರ್ಬಾರ್ದು ಸ್ವಾಮಿ. ಬಂದರೆ ಇಲ್ಲಿಯ ಭೂತದ ದೃಷ್ಟಿಗೆ ಬೀಳ್ತೀರಿ... ನೀವು ಮನೆಯವರಾದ ಕಾರಣ ಏನೂ ಆಗಿಲ್ಲ' ಎನ್ನುತ್ತಾ ಹೆಂಗಸರು ಸಂಜಯನನ್ನು ಶಾಸ್ತ್ರಿಗಳ ಮನೆಗೆ ಬಿಡಲು ಮುಂದಾದರು.

ದಾರಿಯುದ್ದಕ್ಕೂ ಕಾರಂತರ ಮನೆಯವರ ಗುಣಗಾನ ಮಾಡುತ್ತಾ ಹೋದ ಹೆಂಗಸರು ಆನಂದಣ್ಣನೂ ಶೆಟ್ಟರೂ ಸೇರಿ ಕಾರಂತರ ಜಾಗದಲ್ಲಿ ಕೃಷಿ ಮಾಡಿಕೊಂಡಿರುವ ಬಗ್ಗೆ ಹೇಳಿದರು.

ಸಂಜಯನಿಗೆ ಈಗ ಆನಂದಣ್ಣ ಯಾಕೆ ಪುನಃ ಬಂದಿಲ್ಲ ಅಂತ ಅರ್ಥ ಆಯ್ತು. ಶಾಸ್ತ್ರಿಗಳ ಮನೆಗೆ ಬಂದವನೇ ಊಟ ಮಾಡಿ ಮಲಗಿಕೊಂಡ ಸಂಜಯ್.

ಇತ್ತ ಆನಂದಣ್ಣ ಸಂಜಯನನ್ನು ಕಾರಂತರ ಮನೆಗೆ ಬಿಟ್ಟು ನೇರವಾಗಿ ಶೆಟ್ಟರ ಮನೆಗೆ ಬಂದವರೇ ಸಂಜಯನ ಬಗ್ಗೆ ಹೇಳಿದರು. ಸಂಜಯನಿಗೆ ತನ್ನ ಆಸ್ತಿಯ ಎಲ್ಲಾ ವಿಚಾರ ಗೊತ್ತಿರುವುದಾಗಿಯೂ ಮನೆಯ ಬಗ್ಗೆ ಬಹಳ ಹಚ್ಚಿಕೊಂಡಿರುವುದಾಗಿಯೂ ಹೇಳಿದರು.

ಶೆಟ್ಟರಿಗಂತೂ ಏನು ಮಾಡಬೇಕೆಂದು ಗೊತ್ತಾಗಲಿಲ್ಲ. ಬಹಳಷ್ಟು ಖರ್ಚು ಮಾಡಿ ಶ್ರಮಪಟ್ಟು ಕಾರಂತರ ಜಾಗದಲ್ಲಿ ತೋಟ ಮಾಡಿಯಾಗಿದೆ. ಒಳ್ಳೆ ಫಲ ಬರುವ ಸಮಯಕ್ಕೆ ಇವನೊಬ್ಬ ವಕ್ಕರಿಸಿಕೊಂಡಿದ್ದಾನೆ ಅಂದುಕೊಂಡರು ಶೆಟ್ಟರು.

'ಆನಂದಣ್ಣ, ಒಂದು ವೇಳೆ ಈ ಸಂಜಯ್ ಅಮೆರಿಕ ಬಿಟ್ಟು ಇಲ್ಲೇ ಕುಳಿತುಕೊಂಡು ತನಗೆ ಜಾಗಬೇಕೆಂದು ಹೇಳಿದರೆ ನಾವೇನು ಮಾಡುವುದು?' ಕೇಳಿದರು ಶೆಟ್ಟರು.

ಆನಂದಣ್ಣನಿಗೂ ಇದೊಂದು ದೊಡ್ಡ ಸಮಸ್ಯೆಯಾಗಿ ಕಂಡಿತು.

'ಅವನಲ್ಲೇ ನೇರವಾಗಿ ಕೇಳೋಣವೇ?' ಆನಂದಣ್ಣ ಕೇಳಿದರು.

'ಏನು ಹೇಳ್ತಿರಿ ಆನಂದಣ್ಣ, ಕೋಳಿಯತ್ರ ಕೇಳಿ ಅದರ ಕುತ್ತಿಗೆ ಯಾರಾದರೂ ಹಿಚುಕುತ್ತಾರೆಯೇ?' ಶೆಟ್ರು ಗಂಭೀರವಾಗಿ ಪ್ರಶ್ನಿಸಿದರು.

ಆನಂದಣ್ಣನಿಗೂ ಈ ಸಂಕಟ ಹೊಸದೇ. ಯಾವಾಗಲೂ ಊರವರು ಆನಂದಣ್ಣನಲ್ಲಿ ಸಲಹೆಗೆ ಬರುವವರು. ಆನಂದಣ್ಣ ಎಲ್ಲರಿಗೂ ಸಲಹೆ ಕೊಡುವುದರಲ್ಲಿ ನಿಪುಣ. ಆದರೆ ಈ ವಿಷಯದಲ್ಲಿ ಅವರೇ ಸಂತ್ರಸ್ತರೂ ತಪ್ಪಿತಸ್ಥರೂ ಆಗಿರುವ ಕಾರಣ ಇದು ದೊಡ್ಡ ಧರ್ಮಸಂಕಟವಾಗಿ ಪರಿಣಮಿಸಿತ್ತು. ಸುಮ್ಮನೆ ಕುಳಿತುಕೊಂಡು ಇನ್ನೊಬ್ಬರಿಗೆ ಸಲಹೆ ಕೊಡುವುದು ಸುಲಭ, ಆದರೆ ಆ ಸಲಹೆಯನ್ನು ತಾವೇ ನಡೆಸುವುದು ಬಹಳ ಕಷ್ಟ.

ಸ್ವಲ್ಪ ಆಲೋಚನೆ ಮಾಡಿ ಆನಂದಣ್ಣ ಹೇಳಿದರು. 'ಶೆಟ್ರೇ, ನಮ್ಮ ಸಮಸ್ಯೆ ದೊಡ್ಡದೇ. ಆದರೆ ಅವಸರದಲ್ಲಿ ನಾವು ಎಡವಬಾರದು. ತಣ್ಣೀರನ್ನೂ ತಣಿಸಿ ಕುಡಿಯಬೇಕು ಎಂದು ಹೇಳ್ತಾರೆ ನೋಡಿ ಹಾಗೆ. ಮೊದಲಿಗೆ ಈ ಹುಡುಗನ ಮನಸ್ಸಿನಲ್ಲಿ ಏನಿದೆ? ಅವನು ಇಲ್ಲೇ ಉಳಿಯುವ ಮನಸ್ಸಿನಿಂದ ಬಂದಿದ್ದಾನೋ? ಅಥವಾ ಇಲ್ಲಿ ಬಂದ ನಂತರ ಅವನ ಮನಸ್ಸು ಬದಲಾಗಿದೆಯೋ? ಇದನ್ನೆಲ್ಲ ನಾವು ತಿಳ್ಕೊಂಡು ಆಮೇಲೆ ನಮ್ಮ ಹೆಜ್ಜೆ ಹಾಕುವ' ಅಂದರು.

ಶೆಟ್ರಿಗೆ ಇದು ಸರಿ ಕಂಡಿತು. ಹೇಗೂ ಆನಂದಣ್ಣ ಹಿರಿಯರು, ಬುದ್ಧಿವಂತ.

'ಆನಂದಣ್ಣ, ನೀವು ಹೇಳುವುದು ಸರಿ. ಆದರೂ ಈ ಹುಡುಗನ ಮನಸ್ಸಿನಲ್ಲಿ ಏನಿದೆ? ಅವನು ಏನು ಮಾಡುವವನಿದ್ದಾನೆ? ಎಂದು ಅವನ ಹತ್ರ ಕೇಳದೆ ಹೇಗೆ ತಿಳ್ಕೊಳ್ಳುವುದು?' ಅಂತ ಶೆಟ್ರು ಮರುಪ್ರಶ್ನೆ ಹಾಕಿದರು.

ಆನಂದಣ್ಣನಿಗೆ ಆಗ ಶ್ಯಾಮಣ್ಣ ಭಟ್ಟರ ನೆನಪಾಯಿತು. ಶ್ಯಾಮಣ್ಣ ಭಟ್ಟರು ದೇವಸ್ಥಾನದ ಅರ್ಚಕರು. ಅವರು ಭವಿಷ್ಯ ಹೇಳಿದರೆಂದರೆ ಅದು ನೂರಕ್ಕೆ ನೂರು ನಿಜವೇ. ಅವರಿಗೆ ದೇವಿಯೇ ಒಲಿದು ಬಂದು ಅವರ ನಾಲಗೆಯಲ್ಲಿ ಕುಳಿತು ಭವಿಷ್ಯ ಹೇಳುತ್ತಾಳಂತೆ. ಆನಂದಣ್ಣನಿಗೆ ಶಾಮಣ್ಣ ಭಟ್ಟರತ್ತ ಈ ಬಗ್ಗೆ ಪ್ರಶ್ನೆ ಮಾಡಬೇಕು ಅಂತ ಅನ್ನಿಸಿತು. ಆನಂದಣ್ಣ ಅದನ್ನು ಶೆಟ್ರಲ್ಲಿ ಹೇಳಿದರು. ಶೆಟ್ರಿಗೆ ಅದು ಸರಿ ಕಂಡಿತು.

'ಆನಂದಣ್ಣ, ನೀವೇ ಹೋಗಿ ಭಟ್ರಲ್ಲಿ ಪ್ರಶ್ನೆ ಕೇಳ್ತಿರಾ?' ಶೆಟ್ರು ಕೇಳಿದರು.

'ನೀವೂ ನಾನೂ ಒಂದೇ ಅಲ್ವ ಶೆಟ್ರೇ. ಖಂಡಿತ ಹೋಗ್ತೇನೆ' ಅಂದರು ಆನಂದಣ್ಣ.

ವಿಪರೀತ ಬಿಸಿಲಿತ್ತು. ಆನಂದಣ್ಣ ತಲೆಗೆ ಮುಂಡಾಸು ಕಟ್ಟಿಕೊಂಡು ಶ್ಯಾಮಣ್ಣ ಭಟ್ಟರ ಮನೆಗೆ ಹೋದರು.

ಭಟ್ಟರ ಹೆಂಡತಿ ಆನಂದಣ್ಣನನ್ನು ಬರಮಾಡಿಕೊಂಡರು. ಭಟ್ಟರು ದೇವಸ್ಥಾನಕ್ಕೆ ಪೂಜೆಗೆ ಹೋಗಿದ್ದಾರೆ. ಇನ್ನೇನು ಅರ್ಧ ಗಂಟೆಯಲ್ಲಿ ಮನೆಗೆ ಬರುತ್ತಾರೆ ಅಂತ ಹೇಳಿ ನೀರು–ಬೆಲ್ಲ ಕೊಟ್ಟರು. ಆನಂದಣ್ಣ ನೀರು ಕುಡಿದು ಭಟ್ಟರ ಮನೆಯ ಅಂಗಳದಲ್ಲಿ ಆ ಕಡೆ ಈ ಕಡೆ ತಿರುಗಲು ಶುರುಮಾಡಿದರು.

ಒಂದರ್ಧ ಗಂಟೆ ಮುಗಿಯುವ ವೇಳೆಗೆ ಭಟ್ಟರು ಮನೆಗೆ ಬಂದರು. ಬರುವಾಗ ದೇವರ ಗಂಧ ಪ್ರಸಾದವೂ, ಹೂವೂ ತೆಗೆದುಕೊಂಡು ಬಂದಿದ್ದರು. ಆನಂದಣ್ಣನನ್ನು ದೂರದಲ್ಲೇ ನೋಡಿ, 'ಏನು ಆನಂದಣ್ಣ, ಬಹಳ ದಿನಗಳ ಮೇಲೆ ನಿಮ್ಮನ್ನು ನೋಡುತ್ತಿದ್ದೇನೆ. ಹೇಗಿದ್ದೀರಿ? ಎಲ್ಲಾ ಸರಿಯಾಗಿದೆ ತಾನೇ?' ಅಂತ ಪ್ರಶ್ನೆ ಮಾಡಿದರು.

ಆನಂದಣ್ಣ ಭಟ್ಟರಿಗೆ ಭಕ್ತಿಯಿಂದ ಕೈಮುಗಿದು, 'ಎಲ್ಲ ನಿಮ್ಮ ಮತ್ತೆ ಆ ತಾಯಿಯ ಕೃಪೆ ಭಟ್ರೇ. ನಾವೆಲ್ಲ ಚೆನ್ನಾಗಿದ್ದೇವೆ. ನಿಮ್ಮಲ್ಲಿ ಪ್ರಶ್ನೆ ಕೇಳ್ಬೇಕಿತ್ತು... ಶೆಟ್ರು ನಿಮ್ಮಲ್ಲಿಗೆ ಕಳುಹಿಸಿದ್ರು' ಅಂತ ಹೇಳಿದರು.

'ಜಯ ಶೆಟ್ರಾ? ಹೇಗಿದ್ದಾರೆ? ಎಲ್ಲರೂ ಕ್ಷೇಮ ಕಾಣ್ತದೆ' ಅನ್ನುತ್ತಾ ಭಟ್ಟರು ಆನಂದಣ್ಣನನ್ನು ತಮ್ಮ ಮನೆಯ ಚಾವಡಿಗೆ ಕರೆದರು.

ಭಟ್ಟರ ಚಾವಡಿಯಲ್ಲಿ ಎತ್ತರದಲ್ಲಿ ಒಂದು ಮಣೆ. ಅದರ ಮೇಲೆ ಒಂದಷ್ಟು ಕವಡೆ. ಪಕ್ಕದಲ್ಲಿ ಒಂದು ಕಲಶದ ಮೇಲೆ ಒಂದು ತೆಂಗಿನಕಾಯಿ. ಎದುರಲ್ಲಿ ಸ್ವಲ್ಪ ಕುಂಕುಮ ಎದ್ದು ಕಾಣುತ್ತಿತ್ತು. ಇವುಗಳ ನಡುವೆ ಕುಳಿತ ಭಟ್ಟರ ಮುಖದ ಕಳೆ ಎದ್ದು ಕಾಣುತ್ತಿತ್ತು. ಭಟ್ಟರು ಇಲ್ಲಿ ಕುಳಿತರೆಂದರೆ ಎಲ್ಲರೂ ಕೈಮುಗಿದು ನಿಲ್ಲುವವರೇ. ಒಮ್ಮೆ ದೇವಿಯ ಕಲಶದ ಎದುರು ಕುಳಿತು ಅವರು ಪ್ರಾರ್ಥಿಸಿದರೆ ಮುಂದೆ ಅವರು ಈ ಲೋಕದಲ್ಲೇ ಇರುವುದಿಲ್ಲ. ಆ ಕ್ಷಣದಲ್ಲಿ ಅವರಿಗೆ ಎದುರಿರುವವರೆಲ್ಲ ಸರಿಸಮಾನರು. ಅವರ ವಿಶೇಷ ಅಂದರೆ ಅವರು ಅವರಾಗಿ ಏನೂ ಹೇಳುವುದಿಲ್ಲ, ಬದಲಿಗೆ ಕೇಳಿದ ಪ್ರಶ್ನೆಗೆ ಮಾತ್ರ ಉತ್ತರ ಕೊಡುವವರು. ಅವರಲ್ಲಿ ಪ್ರಶ್ನೆ ಕೇಳಲೂ ನಿಮಗೆ ಅನುಭವ ಬೇಕು. ನೀವು ಸರಿಯಾದ ಪ್ರಶ್ನೆ ಕೇಳದಿದ್ದಲ್ಲಿ ನಿಮಗೆ ಬೇಕಾದ ಮಾರ್ಗದರ್ಶನ ಸಿಗುವುದಿಲ್ಲ.

'ನೀವು ಸರಿಯಾದ ಸಮಯಕ್ಕೆ ಬಂದಿರಿ ಆನಂದಣ್ಣ, ಇನ್ನೊಂದು ಅರ್ಧ ಗಂಟೆ ಆಗುತ್ತಿದ್ದರೆ ನಾನು ಊಟ ಮಾಡಿ ಬಿಡುತ್ತಿದ್ದೆ. ನಿಮಗೆ ಗೊತ್ತಿದೆ, ಒಮ್ಮೆ ಊಟ ಮಾಡಿದರೆ ನಂತರ ನಾನು ಪ್ರಶ್ನೆಗೆ ಉತ್ತರ ಕೊಡುವುದಿಲ್ಲ' ಎನ್ನುತ್ತಾ ಭಟ್ಟರು ದೇವರ ಪ್ರಸಾದವನ್ನು ಆನಂದಣ್ಣನ ಕೈಗೆ ಕೊಟ್ಟರು.

ಆನಂದಣ್ಣನಿಗೆ ಇಡೀ ದೇವಲೋಕವೇ ಕೈಗೆ ಬಂದ ಹಾಗಾಯ್ತು. ದೇವರ ಪ್ರಸಾದ ಕಣ್ಣಿಗೆ ಒತ್ತಿಕೊಂಡು ಕುಂಕುಮ ಹಣೆಗೆ ಹಾಕಿಕೊಂಡು ಕೈಮುಗಿದು, 'ಎಲ್ಲಾ ಅಮ್ಮನ ಆಶೀರ್ವಾದ ಭಟ್ರೇ, ನಮ್ಮದೇನುಂಟು.. ಇಲ್ಲದಿದ್ರೆ ನಾನು ನಿಮ್ಮ ಮನೆಗೆ ಬರುವ ಸಮಯಕ್ಕೆ ಸರಿಯಾಗಿ ನೀವೂ ನಿಮ್ಮ ಮನೆಗೆ ಬರಬೇಕೇ? ನನಗೆ ಅಮ್ಮನ ಪ್ರಸಾದ ತೆಗೆದುಕೊಳ್ಳುವ ಭಾಗ್ಯ ಇವತ್ತು ಇತ್ತು' ಎನ್ನುತ್ತಾ ಕೈಮುಗಿದು ನಿಂತರು.

ಭಟ್ಟರು ಕೈಯಲ್ಲಿ ಕುಂಕುಮ ಹಿಡಿದುಕೊಂಡು ದೇವಿಯ ಸ್ತುತಿ ಮಾಡಿಕೊಂಡು ಕಲಶದ ಮೇಲೆ ಕುಂಕುಮ ಹಾಕಲು ಶುರುಮಾಡಿದರು. ಒಂದೈದು ನಿಮಿಷ ದೇವಿಯ ಮಂತ್ರ ಪಠಿಸುತ್ತಾ ಕಣ್ಣುಮುಚ್ಚಿ ಧ್ಯಾನ ಮಾಡಿದರು. ಅದಾದ ಮೇಲೆ ಬಲಗೈಯಿಂದ ಎಲ್ಲಾ ಕವಡೆಗಳನ್ನೂ ಆಚೆಈಚೆ ಮಾಡಿ ಎತ್ತಿ ಕೈಯಲ್ಲಿ ಹಿಡಿದುಕೊಂಡು 'ಏನು ಪ್ರಶ್ನೆ ಹೇಳಿ' ಅಂದರು.

ಇಂತಹ ಕ್ಷಣದಲ್ಲಿ ಭಟ್ಟರು ಎದುರಿದ್ದವರ ಮುಖ ನೋಡುವುದಿಲ್ಲ. ನೋಡಿದರೂ ಆ ನೋಟದಲ್ಲಿ ಅವರು ನಿಮ್ಮನ್ನು ನೋಡುತ್ತಿರುವುದಿಲ್ಲ. ಅವರಿಗೆ ಎದುರಿರುವವನು ಕೇವಲ ಒಬ್ಬ ವ್ಯಕ್ತಿಯಷ್ಟೇ. ಪ್ರಶ್ನೆಗೆ ಉತ್ತರ ಹೇಳಿದ ಮೇಲೆ ಒಮ್ಮೆ ಕವಡೆ ಕೆಳಗಿಟ್ಟರೆ ಮತ್ತೆ ಆ ವಿಷಯ ಅವರು ಮಾತಾಡುವುದಿಲ್ಲ. ನಂತರ ನೀವೇನಾದರೂ ಪ್ರಶ್ನೆಯ ವಿವರ ಕೇಳಿದರೆ ಅದು ಭಟ್ಟರಿಗೆ ಗೊತ್ತೇ ಇರುವುದಿಲ್ಲ. ಹಾಗಾಗಿ ಊರವರೆಲ್ಲ 'ಪ್ರಶ್ನೆಗೆ ದೇವಿಯೇ ಉತ್ತರ ಕೊಡುತ್ತಾಳೆ, ಭಟ್ಟರು ನೆಪಮಾತ್ರ' ಅನ್ನುತ್ತಾರೆ.

ಆನಂದಣ್ಣ ಭಟ್ಟರ ಹತ್ತಿರ ಕೈಮುಗಿದು 'ಅಮ್ಮ, ನಿಮಗೆ ಕಾರಂತರ ಆಸ್ತಿ ಗೊತ್ತಿದೆ. ಆ ಜಾಗದಲ್ಲಿ ನಾನೂ ಶೆಟ್ಟರೂ ಸೇರಿ ಕೃಷಿ ಮಾಡಿಕೊಂಡು ಬಂದಿದ್ದೇವೆ. ಇದು ಇವತ್ತು ನಿನ್ನೆಯದಲ್ಲ, ಈಗಾಗಲೇ ಹತ್ತು ವರ್ಷ ದಾಟಿತು. ಈಗ ಕಾರಂತರ ಮೊಮ್ಮಗ ಅಂತ ಹೇಳಿಕೊಂಡು ಒಬ್ಬ ಹುಡುಗ ಊರಿಗೆ ಬಂದಿದ್ದಾನೆ. ಅವನು ಕಾರಂತರ ಮೊಮ್ಮಗ ಹೌದೋ ಅಲ್ಲವೋ ಅನ್ನುವುದು ಮೊದಲ ಪ್ರಶ್ನೆ' ಅಂತ ಕೇಳಿದರು.